847 ಶ್ರೀ ಸೋಮಶೇಖರ್ ಎಂ ಕೆ (ಕೃಷ್ಣರಾಜ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಹಾನಗರ ಪಾಲಿಕೆಯ ಕೆಲವು ಬಡಾವಣೆಗಳಲ್ಲಿ ಆಸ್ತಿ ತೆರಿಗೆಯನ್ನು ಶೇಕಡಾ 100ಕ್ಕೂ ಅಧಿಕವಾಗಿ ಹೆಚ್ಚಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಮೈಸೂರು ಮಹಾನಗರ ಪಾಲಿಕೆಗೆ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಸರ್ಕಾರ ನೀಡಿರುವ ನಿರ್ದೇಶನವೇನು ,

ಇ) ಚುನಾಯಿತ ಪ್ರತಿನಿಧಿಗಳಿಲ್ಲದ ಸಮಯದಲ್ಲಿ ಮಹಾನಗರ ಪಾಲಿಕೆ ಆಸ್ತಿ ತೆರಿಗೆಯ ದರವನ್ನು ಕೌನ್ಸಿಲ್ ಸಭೆಯಲ್ಲಿ ಚರ್ಚಿಸದೆ ಜಾರಿಗೆ ತರಬಹುದೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) .

ಅ) ಇಲ್ಲ

ಆ) ಕೆ ಎಂ ಸಿ ಕಾಯ್ದೆ 1976ರನ್ವಯ ಆಸ್ತಿ ತೆರಿಗೆಯನ್ನು ವಸೂಲಿ ಮಾಡಲಾಗುತ್ತಿದೆ ಅಂತೆಯೇ, ಇದರ ಆಧಾರದ ಮೇಲೆ, ಪೌರಾಡಳಿತ ನಿರ್ದೇಶಕರು ತಮ್ಮ ಸುತ್ತೋಲೆ ಸಂ ಪೌ ನಿ ಎಸ್ ಎ ಎಸ್ 56/2005–06, ದಿನಾಂಕ 2–9–2005ರಲ್ಲಿ ಆದೇಶ ನೀಡಿ, 2005–2006ನೇ ಸಾಲಿನಿಂದ ತೆರಿಗೆ ದರಗಳನ್ನು ಪರಿಷ್ಕರಿಸಿ ಜಾರಿಗೆ ತರಲು ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿದೆ

ಇ) ಹೌದು

453 ಶ್ರೀ ವಾಟಾಳ್ ನಾಗರಾಜ್, ಎಂಎಲ್ಎ ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ನಾಯಿಗಳು ಮಗುವೊಂದನ್ನು ಕಚ್ಚಿ ತಿಂದು ಕೊಂದಿರುವ ದಾರುಣ ಘಟನೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು,

ಆ) ಬೆಂಗಳೂರು ನಗರವು ಸೇರಿದಂತೆ ರಾಜ್ಯದಲ್ಲಿರುವ ನಾಯಿಗಳ ಸಂಖ್ಯೆ ಎಷ್ಟು ,

ಇ) ನಾಯಿಗಳನ್ನು ನಿಯಂತ್ರಣ ಮಾಡಲು ಇರುವ ಪ್ರಾಣಿ ಜನನ ನಿಯಂತ್ರಣ ಯೋಜನೆ (ಎ ಬಿ ಸಿ) ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ,

ಈ) ಈ ಯೋಜನೆಗೆ ಕಳೆದ ಮೂರು ವರ್ಷಗಳಿಂದ ನಿಗದಿಗೊಳಿಸಿದ ಮತ್ತು ಖರ್ಚು ಮಾಡಿದ ಹಣವೆಷ್ಟು,

ಉ) ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ನಾಯಿಗಳು ಕಚ್ಚಿದರೆ ತಕ್ಷಣ ಔಷಧಿಯನ್ನು ಒದಗಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ನಗರದ ಚಂದ್ರಾಬಡಾವಣೆಯಲ್ಲಿ ನಾಯಿಗಳು ಬಾಲಕಿಯೋರ್ವಳನ್ನು ಕಚ್ಚಿ ಕೊಂದಿರುವ ದಾರುಣ ಘಟನೆಯ ಬಗ್ಗೆ ವಿಷಯ ತಿಳಿಯುತ್ತಿದ್ದಂತೆಯೇ, ಮಹಾನಗರ ಪಾಲಿಕೆಯ ಹಿರಿಯ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಬಾಲಕಿಯ ತಂದೆ ತಾಯಿಯರನ್ನು ಭೇಟಿ ಮಾಡಿ, ಸಾಂತ್ವನ ಹೇಳಿರುತ್ತಾರೆ, ಅಲ್ಲದೆ ಪಾಲಿಕೆಯ ವತಿಯಿಂದ ಬಾಲಕಿಯ ಪೋಷಕರಿಗೆ ಕೂಡಲೇ ರೂ 100 ಲಕ್ಷಗಳ ಪರಿಹಾರವನ್ನು ಸಹ ವಿತರಿಸಲಾಗಿದೆ ಈ ಪ್ರದೇಶದಲ್ಲಿ ಅಂದೇ 37 ನಾಯಿಗಳನ್ನು ಹಿಡಿದು ದಯಾ ಮರಣ ಕ್ಕೊಳಪಡಿಸಲಾಗಿದೆ

ನಗರದಾದ್ಯಂತ ಹಗಲು ಮತ್ತು ರಾತ್ರಿ ವಿಶೇಷ ಕಾರ್ಯಾಚರಣೆಯನ್ನು ನಡೆಸಿದ್ದು, 2203 ನಾಯಿಗಳನ್ನು ಹಿಡಿಯಲಾಗಿದೆ ಮತ್ತು ಇದರಲ್ಲಿ 1274 ಸಮಸ್ಯಾತ್ಮಕ ನಾಯಿಗಳನ್ನು ದಯಾಮರಣಕ್ಕೊಳಪಡಿಸಲಾಗಿದೆ

ದಿನಾಂಕ 5–1–2007ರಂದು ವಿವಿಧ ಸರ್ಕಾರೇತರ ಸಂಸ್ಥೆಗಳು, ಪಶುಪಾಲನಾ ಇಲಾಖೆ ಮತ್ತು ಪಾಲಿಕೆಯ ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಯ ಸಹಕಾರದೊಂದಿಗೆ ಪ್ರಾರಂಭಿಸಿರುವ ವಿಶೇಷ ಕಾರ್ಯಾಚರಣೆಯು ಇನ್ನೂ ಮುಂದುವರೆದಿದ್ದು, ಚಂದ್ರಾಬಡಾವಣೆಯೊಂದರಲ್ಲಿಯೇ ಇದು ವರೆಗೂ 222 ನಾಯಿಗಳನ್ನು ಹಿಡಿಯಲಾಗಿದೆ

ಆ) 17ನೇ ಜಾನುವಾರು ಗಣತಿ 2003ರ ಪ್ರಕಾರ ರಾಜ್ಯದಲ್ಲಿರುವ ನಾಯಿಗಳ ಸಂಖ್ಯೆ 260,9,185, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1,11,405 ನಾಯಿಗಳು (ಬೀದಿ ನಾಯಿಗಳು ಮತ್ತು ಸಾಕುನಾಯಿಗಳು) ಇರುತ್ತವೆ

ಇ) ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶದಲ್ಲಿ ಎ ಬಿ ಸಿ ಕಾರ್ಯಕ್ರಮದಿಂದಾಗಿ ಬೀದಿನಾಯಿಗಳ ಸಂಖ್ಯೆ ಕಡಿಮೆಯಾಗಿರುತ್ತದೆ ಕಳೆದ 2 ವರ್ಷಗಳಿಂದ ಯಾವುದೇ ರೇಬೀಸ್ ಪ್ರಕರಣಗಳು ವರದಿಯಾಗಿರುವುದಿಲ್ಲ ಅಲ್ಲದೆ ರಾಜ್ಯದಲ್ಲಿರುವ ಇತರೆ ನಗರಸಭೆ/ಮಹಾನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಎ ಬಿ ಸಿ ಕಾರ್ಯಕ್ರಮದಿಂದಾಗಿ ನಾಯಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ

ಈ) ರಾಜ್ಯದಲ್ಲಿರುವ ಎಲಾ ಮಹಾನಗರ ಪಾಲಿಕೆಗಳು/ನಗರಸಭೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಈ ಯೋಜನೆಗೆ ಒಟ್ಟು ರೂ 433 34 ಲಕ್ಷಗಳನ್ನು ನಿಗದಿಪಡಿಸಿದ್ದು, ಇದರಲ್ಲಿ ರೂ 403 77 ಲಕ್ಷಗಳನ್ನು ಖರ್ಚು ಮಾಡಲಾಗಿದೆ

ಉ) ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಆಸ್ಪತ್ರೆಗಳಲ್ಲಿ ಆ್ಯಂಟಿ ರೇಬೀಸ್ ಲಸಿಕೆ ಸದಾ ಉಚಿತವಾಗಿ ಲಭ್ಯವಿರುತ್ತದೆ ತುರ್ತು ಸಂದರ್ಭಗಳಲ್ಲಿ ಆಸ್ಪತ್ರೆಗಳಲ್ಲಿ ಲಸಿಕೆ ಮುಗಿದು ಹೋದರೆ ವೈದ್ಯರೇ ಸ್ಥಳಿಯವಾಗಿ ರೂ 10,000–00 ವರೆಗೆ ಖರೀದಿಸಲು ಅವಕಾಶ ವಿರುತ್ತದೆ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ರೇಬೀಸ್ ನಿರೋಧಕ ಚುಚ್ಚುಮದ್ದಿನ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ

321 ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜನಗರ) ಮಾನ್ಯ ಗೃಹ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ದೇವಯ್ಯ ಭವನದಲ್ಲಿರುವ ಸಬ್ ಏರಿಯಾ ಸಿ ಎಸ್ ಡಿ ಕ್ಯಾಂಟೀನನ್ನು ಮುಂದುವರೆಸುವಂತೆ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಮಾಜಿ ಸೈನಿಕರು ನೀಡಿದ ಮನವಿಯ ಬಗ್ಗೆ ಸರ್ಕಾರ ಯಾವ ಕ್ರಮ ವಹಿಸಿದೆ,

ಆ) ಮೈಸೂರಿನ ದೇವಯ್ಯ ಭವನದ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ECHS ಅಧಿಕಾರ ವರ್ಗದವರು ಖಾಯಂ ಪಾಲಿಕ್ಲಿನಿಕ್ ನಿರ್ಮಿಸಲು ಅನುಮತಿ ಕೋರಿದ್ದು ಈ ಮಾಜಿ ಸೈನಿಕರು ಸಲ್ಲಿಸಿರುವ ಮನವಿ ಬಗ್ಗೆ ಸರ್ಕಾರದ ನಿಲುವೇನು ,

ಇ) ನಿವೃತ್ತ ಯೋಧರ ಕಲ್ಯಾಣಕ್ಕಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ಹಾಗೂ ಕೈಗೊಳ್ಳುತ್ತಿದೆ ?

ಮಾನ್ಯ ಗೃಹ ಮಂತ್ರಿಗಳು :

ಅ) ಈ ಹಿಂದೆ ಕರ್ನಾಟಕ ಮತ್ತು ಕೇರಳ ಸಬ್ ಏರಿಯಾದವರು ಮೈಸೂರಿನ ಸ್ಕ್ವಾಡ್ರನ್ ಲೀಡರ್ ಎ ಬಿ ದೇವಯ್ಯ ಭವನದಲ್ಲಿ ಮಾಜಿ ಸೈನಿಕರ ಮತ್ತು ಅವರ ಅವಲಂಬಿತರಿಗೆ ವೈದ್ಯಕೀಯ ಅನುಕೂಲಕ್ಕಾಗಿ ಒಂದು ಪಾಲಿಕ್ಲಿನಿಕ್ ಮತ್ತು ಸಿ ಎಸ್ ಡಿ ಕ್ಯಾಂಟೀನನ್ನು ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂಖ್ಯೆ ಒಇ 70 ಕಸೈಸೇ 2003, ದಿನಾಂಕ 15 4 2004 ರಲ್ಲಿ ಸದರಿ ಪಾಲಿಕ್ಲಿನಿಕ್ ಮತ್ತು ಸಿ ಎಸ್ ಡಿ ಕ್ಯಾಂಟೀನನ್ನು ಪ್ರತ್ಯೇಕವಾದ ಸೂಕ್ತ ಸ್ಥಳ ದೊರೆಯುವವರೆಗೆ ಮೈಸೂರಿನ ಸ್ಕ್ವಾಡ್ರನ್ ಲೀಡರ್ ಎ ಬಿ ದೇವಯ್ಯ ಭವನದ ಕಟ್ಟಡದಲ್ಲಿ ತಾತ್ಕಾಲಿಕವಾಗಿ